# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಜೆ.ಎ.ಶಿವರಾಮ, ಗ್ರೇಡ್-1 ಕಾರ್ಯದರ್ಶಿ, ಬ್ಯಾಡರಹಳ್ಳಿ ಗ್ರಾಮ ಪಂಚಾಯತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ ರವರ ವಿರುದ್ಧ ಲೋಕಾಯುಕ್ತ ವಿಚಾರಣೆ- ಅಂತಿಮ ಆದೇಶ ಹೊರಡಿಸುವ ಕುರಿತು - ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/396/ಗ್ರಾಪಂಕಾ/2013, ದಿನಾಂಕ:30-11-2013.
2. ಅಪರ ನಿಬಂಧಕರು ವಿಚಾರಣೆಗಳು-7, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತ ರವರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ:LOK/INQ/14-A/507/2013/ARE-7 ದಿನಾಂಕ: 07-11-2017.
3. ಮಾನ್ಯ ಉಪಲೋಕಾಯುಕ್ತ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/INQ/14-A/507/2013/ARE-7 ದಿನಾಂಕ: 08-11-2017.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/841/ಗ್ರಾಪಂಕಾ/2017, ದಿನಾಂಕ: 29-11-2017.
5. ಶ್ರೀ ಜೆ.ಎ.ಶಿವರಾಮ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ:05-02-2018.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಜೆ.ಎ.ಶಿವರಾಮ, ಗ್ರೇಡ್-1 ಕಾರ್ಯದರ್ಶಿ, ಬ್ಯಾಡರಹಳ್ಳಿ ಗ್ರಾಮ ಪಂಚಾಯತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-A ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-7, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 9 ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ":**

ಶ್ರೀ. ಜೆ.ಎ.ಶಿವರಾಮ, ಗ್ರೇಡ್-1 ಕಾರ್ಯದರ್ಶಿ, ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಬ್ಯಾಡರಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಗ್ರೇಡ್-1 ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಬಾಗೂರು ಹೋಬಳಿ, ಮರುವನಹಳ್ಳಿ ಗ್ರಾಮದಲ್ಲಿರುವ ತನ್ನ ತಾಯಿಗೆ ಸೇರಿದ ಆಸ್ತಿಯ ಒಂದು ಮನೆಯನ್ನು ತನ್ನ ತಂಗಿಯಾದ ಎಂ.ಎನ್.ಪ್ರೇಮಾರವರಿಗೆ ಖಾತೆ ಬದಲಾವಣೆ ಮಾಡಿಕೊಡುವಂತೆ ಶ್ರೀ ಎಂ.ಎನ್.ರಾಮಚಂದ್ರ ಬಿನ್ ಲೇಟ್ ನಿಂಗೇಗೌಡ ರವರು(ದೂರುದಾರರು) ಶ್ರೀ ಜೆ.ಎ.ಶಿವರಾಮ, ಕಾರ್ಯದರ್ಶಿ, ರವರಿಗೆ ಅರ್ಜಿ ಸಲ್ಲಿಸಿದ್ದು, ಸದರಿ ಖಾತೆ ಬದಲಾವಣೆ ಮಾಡಲು ರೂ.5,000/-ಲಂಚ ನೀಡುವಂತೆ ಶ್ರೀ ಜೆ.ಎ.ಶಿವರಾಮ, ಒತ್ತಾಯಿಸಿದ್ದು, ಕೊನೆಗೆ ರೂ.2,500/-ಗಳನ್ನಾದರೂ ನೀಡುವಂತೆ ಒತ್ತಾಯಿಸಿ, ಮುಂಗಡವಾಗಿ ರೂ.500/-ಗಳನ್ನು ಪಡೆದು ಉಳಿದ ಮೊತ್ತ ರೂ.2000/-ಗಳನ್ನು ದಿನಾಂಕ:26-04-2012ರಂದು ಲಂಚವನ್ನು ಪಡೆಯುವ ಸಂದರ್ಭದಲ್ಲಿ ಲೋಕಾಯುಕ್ತ ಪೋಲೀಸರ ಬಲೆಗೆ ಬಿದ್ದು ದುರ್ನಡತೆ ಎಸಗಿದ್ದು, ಸರ್ಕಾರಿ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ನಿಷ್ಠೆ ತೋರದೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಸದರಿಯವರು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮ 1966 ರ ನಿಯಮ 3(1) ಅನ್ವಯ ದುರ್ನಡತೆ ಎಸಗಿರುತ್ತಾರೆ."

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಜೆ.ಎ.ಶಿವರಾಮ, ಗ್ರೇಡ್-1 ಕಾರ್ಯದರ್ಶಿ, ಬ್ಯಾಡರಹಳ್ಳಿ ಗ್ರಾಮ ಪಂಚಾಯತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ, ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರು ಅಂಗೀಕರಿಸಿ ಶ್ರೀ ಜೆ.ಎ.ಶಿವರಾಮ, ಗ್ರೇಡ್-1 ಕಾರ್ಯದರ್ಶಿ, ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 (viii) ಅನ್ವಯ "ಸೇವೆಯಿಂದ ವಜಾಗಳಿಸುವ" ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಜೆ.ಎ.ಶಿವರಾಮ, ಗ್ರೇಡ್-1 ಕಾರ್ಯದರ್ಶಿ ಇವರಿಗೆ ನಿಯಮಾನುಸಾರ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ಲೋಕಾಯುಕ್ತರವರು ತಮ್ಮ ಶಿಫಾರಸ್ಸಿನಲ್ಲ ಯಾವುದೇ ಸಾಕ್ಷಿಗಳ ಹೇಳಿಕೆ ಹಾಗೂ ದಾಖಲೆಗಳ ಸಾಕ್ಷಿಯನ್ನು ಪರಿಗಣಿಸದೇ ನನ್ನ ಮೇಲೆ ಶಿಕ್ಷೆಯ ಪ್ರಮಾಣವನ್ನು ನಿಗಧಿಗೊಳಿಸಿ ಶಿಫಾರಸ್ಸು ಮಾಡಿರುವುದು ನಿಯಮಕ್ಕೆ ವಿರುದ್ಧವಾಗಿರುತ್ತದೆ. ಮಾನ್ಯ ಉಪಲೋಕಾಯುಕ್ತರವರಿಗೆ ಶಿಕ್ಷೆಯ ಪ್ರಮಾಣವನ್ನು ಶಿಫಾರಸ್ಸು ಮಾಡುವ ಅಧಿಕಾರ ವ್ಯಾಪ್ತಿಯೇ ಇರುವುದಿಲ್ಲ. ಈ ಪ್ರಕರಣದಲ್ಲಿ ನನ್ನ ಪದದತ್ತವಾದ ಅಧಿಕಾರದಿಂದ ಯಾವುದೇ ತರಹದ ಕೆಲಸ ಮಾಡಿಕೊಡಲು ಅವರ ಬಳಿ ಬಾಕಿ ಇರಲಿಲ್ಲ ಹಾಗೂ ದೂರುದಾರರಿಂದ ಲಂಚದ ಹಣಕ್ಕಾಗಿ ಯಾವುದೇ ಬೇಡಿಕೆ ಇಟ್ಟಿರಲಿಲ್ಲವಾದ್ದರಿಂದ ಲಂಚದ ಹಣ ಪಡೆಯುವ ಪ್ರಮೇಯವೇ ಉದಭವಿಸುವುದಿಲ್ಲ. ವಿಚಾರಣಾಧಿಕಾರಿಗಳ ಮುಂದೆ ದೂರುದಾರರು ಹಾಗೂ ನೆರಳು ಪಂಚ ಸಾಕ್ಷಿಗಳು ಇಬ್ಬರು ತಮ್ಮ ಹೇಳಿಕೆಗಳನ್ನು ಒಬ್ಬರಿಗೊಬ್ಬರು ವ್ಯತಿರಿಕ್ತವಾಗಿ ನೀಡಿದ್ದು ಅವರ ಹೇಳಿಕೆಗಳು ಒಂದಕ್ಕೊಂದು ಸಾಮ್ಯತೆಯಿಂದ ಕೂಡಿದ್ದಾಗಿರುವುದಿಲ್ಲ. ದೂರುದಾರರ ದಾಯಾದಿಗಳಾದ ಸಣ್ಣರಂಗಮ್ಮ ಮತ್ತು ಅವರ ಮಗ ಬಿ.ಆರ್.ಕೃಷ್ಣಸ್ವಾಮಿರವರು 23-1-2012 ರಂದೆ ಖಾತೆ ಬದಲಾವಣೆ ಮಾಡದಂತೆ ತಕರಾರು ಸಲ್ಲಿಸಿದ್ದರಿಂದ ದೂರುದಾರರ ತಂಗಿಯ ಖಾತಾ ಬದಲಾವಣೆಯ ಬಗ್ಗೆ ಪಂಚಾಯತಿಯ ಸಭೆಗಾಗಲಿ, ಸ್ವತಃ ತಾವೇ ಆಗಲಿ ಖಾತಾ ಬದಲಾಯಿಸಲು ಇಲಾಖಾ ನಿಯಮದಲ್ಲಿ ಅವಕಾಶ ಇರಿವುದಿಲ್ಲ ಹಾಗೂ ಪಂಚಾಯತಿಯ ಸಭೆಯ ನಿರ್ಣಯವೇ ಖಾತಾ ಬದಲಾಯಿಸುವ ಸೂಕ್ತ ಪ್ರಾಧಿಕಾರ ಮತ್ತು ಅಂತಿಮ ಪ್ರಾಧಿಕಾರವಾಗಿರುತ್ತದೆ. ಮಾನ್ಯ ಸತ್ರ ನ್ಯಾಯಾಲಯ ಹಾಸನ ಇವರೂ ಸಹ ನನ್ನನ್ನು ಇದೇ ಆರೋಪದ ವಿಚಾರಣೆ ನಡೆಸುತ್ತಿರುವುದರಿಂದ ಮಾನ್ಯ ಉಪಲೋಕಾಯುಕ್ತರವರ ವಿಚಾರಣಾ ಪ್ರಾಧಿಕಾರವು ಸತ್ರ ನ್ಯಾಯಾಲಯದ ಆದೇಶದವರೆಗೂ ಅಂತಿಮ ನಿರ್ಧಾರಕ್ಕೆ ಬರಲಾಗಿವುದಿಲ್ಲ.

2ನೇ ಕಾರಣ ಕೇಳುವ ನೋಟೀಸ್‌ನ ಮುಖಪುಟ ಪ್ರತಿ ಹಾಗೂ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿ ಮಾತ್ರ ನೀಡಲಾಗಿದೆ. ಅಪರ ನಿಬಂಧಕರು ವಿಚಾರಣೆಗಳು-7 ರ ಇಲಾಖಾ ವಿಚಾರಣಾ ವರದಿ ಹಾಗೂ ಅವರ ಲಗತ್ತುಗಳ ದಾಖಲೆಗಳು ಹಾಗೂ ನಿಮ್ಮ ವರದಿಯ ದಾಖಲೆಗಳನ್ನು ನನಗೆ ನೀಡಿರುವುದಿಲ್ಲ. ದಾಖಲೆಗಳನ್ನು ನೀಡುವಂತೆ ಕೋರಿಕೊಂಡರು ಸಹ ತಾವು ಇದುವರೆಗೂ ನನಗೆ ಒದಗಿಸಿರುವುದಿಲ್ಲ. ನಿಯಮ 12ರಂತೆ ಯಾವುದೇ ಕ್ರಮ ವಹಿಸದೆ 2ನೇ ಕಾರಣ ಕೇಳುವ ನೋಟಿಸನ್ನು ಅಪೂರ್ಣ ದಾಖಲೆಗಳೊಂದಿಗೆ ನೀಡಿರುವುದು ಕೆ.ಸಿ.ಎಸ್(ಸಿ.ಸಿ.ಎ) ನಿಯಮ 1957 ರಂತೆ ನಿಯಮ ಬಾಹಿರವಾಗಿರುತ್ತದೆ. ನಾನು ನನ್ನಲ್ಲಿದ್ದ ದಾಖಲೆಗಳ ಮೇಲೆಯೇ ಈ ಲಿಖಿತ ಹೇಳಿಕೆ ನೀಡಿರುತ್ತೇನೆ. ನನ್ನ ವಿರುದ್ಧ ಇರುವ ಆರೋಪವು ಸತ್ಯಕ್ಕೆ ದೂರವಾದುದು. ಈ ಪ್ರಕರಣದಿಂದ ಕೈಬಿಟ್ಟು ದೋಷಮುಕ್ತಗೊಳಿಸಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ ಎಂದು ತಿಳಿಸಿರುತ್ತಾರೆ".

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ತಮ್ಮ ವಿಚಾರಣಾ ವರದಿಯ ಪುಟ ಸಂಖ್ಯೆ 6 ರಿಂದ 20 ರ ವರೆಗೆ ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ.

In the view of the nature of the request of PW-1 there was possibility of demand and acceptance of bribe amount of Rs.2000/- by the DGO., there is no dispute the amount was recoverd at the instance of the DGO., and that he was caught red-handedly.The evidence of PW- 3 who is the Investigation Officer also makes it very clear with regard to the procedure of pre-trap and trap as well as the seizure of amount and consequential documents. It is necessary to mention no fruitful cross examination was conducted on behalf of the DGO., to disprove the charges leveled against the DGO.,

In the case on hand the applicant by name Smt.Prema has given the application for change of khata on 5-2-2012 and ever since the khata was not changed in her name even as on the date of trap dtd:26-4-2012.The said fact makes it very clear ever since 5-2-2012 till 26-4-2012 the DGO., has not attended the work of the complainant and his sister for change of khata. It is also forthcoming in the complaint that on 10-4-2012 the complainant has also paid bribe of Rs.500/- and that the DGO., has insisted for balance bribe of Rs.2000/-.The contents of Ex.P-4 also reveals the possession of the bribe amount. The Investigation Officer is also of the opinion that the DGO., has demanded and accepted the bribe of Rs.2000/- For the reasons stated above the DGO., being the Government/Public Servant has failed to maintain absolute integrity besides devotion to duty and acted in a manner unbecoming of Governmemt servant. On appreciation of entire oral and documentary evidence I hold that the charges levelled against the DGO., is established beyond all probabilities. Hence, I answer Point No.1 in the Affirmative.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತ ರವರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀವ್ರತೆಗೆ ಅನುಗುಣವಾಗಿ. ಶ್ರೀ ಜೆ.ಎ.ಶಿವರಾಮ, ಗ್ರೇಡ್–1 ಕಾರ್ಯದರ್ಶಿ, ಬ್ಯಾಡರಹಳ್ಳಿ ಗ್ರಾಮ ಪಂಚಾಯತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 (viii) ಅನ್ವಯ **"ಸೇವೆಯಿಂದ ವಜಾಗಳಿಸುವ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತದೆ. ಆದುದರಿಂದ ಶ್ರೀ ಜೆ.ಎ.ಶಿವರಾಮ, ಗ್ರೇಡ್–1 ಕಾರ್ಯದರ್ಶಿ, ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುತ್ತದೆ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸನ್ನು ಪರಿಶೀಲಿಸಿ ಶ್ರೀ ಜೆ.ಎ.ಶಿವರಾಮ, ಗ್ರೇಡ್–1 ಕಾರ್ಯದರ್ಶಿ, ಬ್ಯಾಡರಹಳ್ಳಿ ಗ್ರಾಮ ಪಂಚಾಯತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 (viii) ಅನ್ವಯ **"ಸೇವೆಯಿಂದ ವಜಾಗಳಿಸುವ"** ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/841/ಗ್ರಾಪಂಕಾ/2017, ಬೆಂಗಳೂರು, ದಿನಾಂಕ:17-04-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಜೆ.ಎ.ಶಿವರಾಮ, ಗ್ರೇಡ್-1 ಕಾರ್ಯದರ್ಶಿ, ಬ್ಯಾಡರಹಳ್ಳಿ ಗ್ರಾಮ ಪಂಚಾಯತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 (viii) ಅನ್ವಯ **"ಸೇವೆಯಿಂದ ವಜಾಗಳಿಸುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

19/4/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1.ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2.ಮಾನ್ಯ ಉಪಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3.ಅಪರ ನಿಬಂಧಕರು, ವಿಚಾರಣೆಗಳು-7, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4.ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ ಜಿಲ್ಲೆ.
6.ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
7.ಶ್ರೀ ಜೆ.ಎ.ಶಿವರಾಮ, ಗ್ರೇಡ್-1 ಕಾರ್ಯದರ್ಶಿ, ಬ್ಯಾಡರಹಳ್ಳಿ ಗ್ರಾಮ ಪಂಚಾಯತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.
8.ಗಣಕ ಕೋಶ
9.ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.